**ವಿಷಯ :- ಕುಂದಾಪುರ ಪುರಸಭೆಯ ಕಾಮಗಾರಿಗಳು**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 216 (1624)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ, (ಕುಂದಾಪುರ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ನಡೆದ ವಿವಿಧ ಕಾಮಗಾರಿಗಳಾವುವು?

2) ಯಾವ ಆದ್ಯತೆಯ ಮೇರೆಗೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

3) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು? ಕಾಮಗಾರಿಗಳ ಪೂರ್ಣ ವಿವರ ಅಂದಾಜು ವೆಚ್ಚ

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1) ಅ) ಕುಡಿಯುವ ನೀರಿನ ಸರಬರಾಜು ಕಾಮಗಾರಿ
ಆ) ಚರಂಡಿ ಕಾಮಗಾರಿ
ಇ) ರಸ್ತೆ ಕಾಮಗಾರಿ

2) ನೀರು ಸರಬರಾಜು ಮತ್ತು ಜನಾರೋಗ್ಯದ ಆದ್ಯತೆಯ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

3) ರೂ. 9,40,000-00

| ಕ್ರ. ನಂ. | ಕಾಮಗಾರಿಗಳ ವಿವರ | ಅಂದಾಜು ವೆಚ್ಚ |
|---|---|---|
| 1. | ಪುರಸಭೆಯ ಮುಖ್ಯರಸ್ತೆ ಚರಂಡಿ ಕಟ್ಟಿಸುವುದು | 1,00,000-00 |
| 2. | ಭಗವಾನ್ ಬಿಲ್ಡಿಂಗ್ ರಸ್ತೆಯಲ್ಲಿ ಚರಂಡಿ ವ್ಯವಸ್ಥೆ. | 1,00,000-00 |
| 3. | ಕಾಲೇಜ್ ಕಾಂಪೌಂಡ್ ಬಳಿ ತೆರೆದ ಬಾವಿ ನಿರ್ಮಾಣ | 1,80,000-00 |
| 4. | ಖಾರ್ವಕೇರಿಯಲ್ಲಿ ಚರಂಡಿ ವ್ಯವಸ್ಥೆ | 1,00,000-00 |
| 5. | ದೇವಿ ನರ್ಸಿಂಗ್ ಹೋಂ ಹತ್ತಿರ ಚರಂಡಿ ವ್ಯವಸ್ಥೆ | 1,00,000-00 |

| | | |
|---|---|---|
| 6. | ದಾರಿದೀಪಗಳ ಅಭಿವೃದ್ಧಿ | 1,00,000-00 |
| 7. | ಕುಂಡೇಶ್ವರ ದೇವಸ್ಥಾನದ ಬಳಿ ರಸ್ತೆ ಕಾಮಗಾರಿ | 30,000-00 |
| 8. | ಡ್ಯಾಗ್ ಫೆರಿ ರಸ್ತೆಯಲ್ಲಿ ಪಿ.ವಿ.ಸಿ. ಪೈಪ್ ಲೈನ್ | 40,000-00 |
| 9. | ಡರ್ಗ್ ರಸ್ತೆಯಲ್ಲಿ ಪಿವಿಸಿ ಪೈಪ್ ಲೈನ್ ಆಳವಡಿಕೆ | 50,000-00 |
| 10. | ಕೋಡಿಯಲ್ಲಿ ಕುಡಿಯುವ ನೀರಿನ ಮತ್ತು ಪಂಪ್ ಆಳವಡಿಕೆ | 40,000-00 |
| 11. | ಖಾರ್ವೆ ಕೇರಿಯಲ್ಲಿ ಡಕ್ ನಿರ್ಮಾಣ | 50,000-00 |
| 12. | ಖಾರ್ವೆ ಕೇರಿಯಲ್ಲಿ ನೀರು ಸರಬರಾಜು ಅಭಿವೃದ್ಧಿ | 50,000-00 |
| | ಒಟ್ಟು | 9,40,000-00 |

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ** :- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸುವಂಥ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಇರಬೇಕು. ಬಹುಶಃ ಅವರು ಕೊಟ್ಟಂಥ ಮಾಹಿತಿಯನ್ನು ತಂದು ಇಲ್ಲಿ ಉತ್ತರ ಕೊಡುತ್ತಾರೆ. ಬಹುಶಃ ಆ ಮಾಹಿತಿ ಎಷ್ಟು ಅಸಮರ್ಪಕವಾಗಿ ಇದೆ ಎನ್ನುವುದು ನಿಮಗೆ ಗೊತ್ತಿರುವುದಿಲ್ಲ. ಈ ಹಿಂದೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಕುಂದಾಪುರ ಪುರಸಭೆ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಲ್ಲಿ ಮಂಜೂರು ನಿಜವೇ ಎಂದು ಕೇಳಿದ್ದೆ. ಆದೇ ರೀತಿಯಲ್ಲಿ ಎಷ್ಟು ಹಣ ಅದಕ್ಕೆ ವೆಚ್ಚವಾಗಿದೆ, ಬಿಡುಗಡೆಯಾಗಿದೆ ಎನ್ನತಕ್ಕಂಥದ್ದನ್ನು ಕೂಡ ಕೇಳಿದ್ದೆ. 38.33 ಲಕ್ಷ ಬಿಡುಗಡೆಯಾಗಿದೆ ಆದರೆ ಯಾವುದೇ ಹಣ ಇದುವರೆಗೆ ವೆಚ್ಚ ಮಾಡಲಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಕೇವಲ ಒಂಭತ್ತು ಲಕ್ಷ ನಲವತ್ತು ಸಾವಿರ ಕೆಲಸವನ್ನು ತಾವು ನಮೂದಿಸಿದ್ದೀರಿ, ಆದರ ಅರ್ಥ ಏಕೆ ಹಿಂದೆ ಇಟ್ಟಂಥ ಹಣವನ್ನು ಖರ್ಚು ಮಾಡಿಲ್ಲ? ಮತ್ತು ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು? ಮತ್ತು ಕೆಲವು ಕೆಲಸಗಳನ್ನು ತಾವು ತೆಗೆದು ಕೊಂಡಿರತಕ್ಕಂಥ ವಿಚಾರವನ್ನು ಹೇಳಿದ್ದೀರಿ ಬಹುಶಃ ಅದರಲ್ಲಿ ಹೆಚ್ಚಿನ ಕೆಲಸಗಳು ಪೂರ್ಣ ಆಗಿಲ್ಲ. ಸಂಪೂರ್ಣವಾದ ಮಾಹಿತಿ ತಮಗೂ ಸಹಿತ ಇಲ್ಲ ಏಕೆಂದರೆ ಅಧಿಕಾರಿಗಳು ಒಂದು ಕಡೆ ಒಂದು ಉತ್ತರ ಕೊಡುತ್ತಾರೆ, ಮತ್ತೊಂದು ಕಡೆ ಮತ್ತೊಂದು ಉತ್ತರ ಕೊಡುತ್ತಾರೆ, ಅದನ್ನು ತಾವು ಇಲ್ಲಿ ಹೇಳುತ್ತೀರಿ, ಇದರ ಬಗ್ಗೆ ತಾವು ಪರಿಶೀಲನೆ ಮಾಡುತ್ತೀರೋ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ವರ್ಕ್ಸ್ ಏನು ಇದೆ, ಅದರ ಎಸ್ಟಿಮೇಟ್ ಕಾಸ್ಟ್ ಏನು ಇದೆ ಅದನ್ನೆಲ್ಲಾ ಕೊಟ್ಟಿದ್ದೇನೆ.

ಎಲ್ಲಾದರೂ ತಪ್ಪಾಗಿದೆ ಎಂದು ತಾವು ಹೇಳಿದರೆ ಅದಕ್ಕೆ ನಾನು ಸ್ವಲ್ಪ ಸರಿಪಡಿಸಿ ಕೊಳ್ಳುತ್ತೇನೆ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ** :- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಕೇಳಿರುವಂಥ ಪ್ರಶ್ನೆ ಕುಂದಾಪುರ ಪುರಸಭೆ ವ್ಯಾಪ್ತಿಯೊಳಗೆ ನಡೆದಿರತಕ್ಕಂಥ ಕಾಮಗಾರಿಗಳು ಯಾವು ಯಾವುದು? ಮತ್ತು ಯಾವ ಯಾವ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು ಎಂದು ನಾನು ಕೇಳಿದ್ದೇನೆ. ಮತ್ತು ಅವುಗಳನ್ನು ಯಾವ ಆದ್ಯತೆಯ ಮೇಲೆ ತೆಗೆದುಕೊಂಡಿದ್ದೀರಿ? ಅದರಲ್ಲಿ ಒಂದು ವಿಚಾರವನ್ನು ಮುಚ್ಚಿಟ್ಟಿದ್ದಾರೆ. ಕುಂದಾಪುರಕ್ಕೆ ಮಧ್ಯಮ ಪಟ್ಟಣಗಳ ಮತ್ತು ಸಮಗ್ರ ಪಟ್ಟಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಣ ಮಂಜೂರಾತಿಯಾದದ್ದು ಒಂದು ಕೋಟಿ ರೂಪಾಯಿ. ಅದರಲ್ಲಿ 38.33 ಲಕ್ಷ ಹಣ ಬಿಡುಗಡೆಯಾಗಿದೆ. ಅದನ್ನು ಏಕೆ ಖರ್ಚು ಮಾಡಲಿಲ್ಲ? ಅದನ್ನು ಏಕೆ ಮುಚ್ಚಿಡಲು ಪ್ರಯತ್ನ ಮಾಡುತ್ತಿದ್ದೀರಿ? ಇದರಲ್ಲಿ ಆ ವಿವರಗಳು ಇಲ್ಲ, ಹಿಂದೆ ಕೊಟ್ಟಂಥ ಉತ್ತರದಲ್ಲಿ ಇದು ಇತ್ತು. ಅದನ್ನು ಏಕೆ ಮುಚ್ಚಿಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ?

**ಶ್ರೀ ಮಿರಾಜುದ್ದೀನ್ ಎನ್. ಪಟೇಲ್** :- ಸನ್ಮಾನ್ಯ ಅಧ್ಯಕ್ಷರೇ, 38.33 ಲಕ್ಷ ರೂಪಾಯಿ ಬಿಡುಗಡೆಯಾದ ಬಗ್ಗೆ ಈ ಉತ್ತರದಲ್ಲಿ ಇಲ್ಲ. ತಮ್ಮಲ್ಲಿ ಬೇರೆ ಯಾವುದು ಉತ್ತರ ಇದೆ ಅದು ನನಗೆ ಗೊತ್ತಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ** :- ಮಾನ್ಯ ಅಧ್ಯಕ್ಷರೇ, ದಯಮಾಡಿ ತಾವು ಅರ್ಥ ಮಾಡಿಕೊಂಡರೆ ಒಳ್ಳೆಯದು. ಏಕೆಂದರೆ ನನಗೆ ಅವರನ್ನೂ ಕನ್ವಿನ್ಸ್ ಮಾಡುವುದಕ್ಕೆ ಆಗುತ್ತಿಲ್ಲ. ತಾವು ಗಮನಿಸಿದರೆ ಒಳ್ಳೆಯದು. ತಮಗೆ ಅರ್ಥ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

**ಅಧ್ಯಕ್ಷರು** :- ನಾನು ಅರ್ಥಮಾಡಿಕೊಂಡು ಏನು ಮಾಡಲಿ?

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ** :- ಸನ್ಮಾನ್ಯ ಅಧ್ಯಕ್ಷರೇ, 291 ನೇ ಪ್ರಶ್ನೆ 11-7-1996 ರಲ್ಲಿ ನಾನು ಕೇಳಿದ್ದೆ. ಹಾಗೆ ಕೇಳಿದ ಸಂದರ್ಭದಲ್ಲಿ ಅದಕ್ಕೆ ಲಿಖಿತವಾಗಿ ಉತ್ತರ ಬಂದಿದೆ. ಈಗಾಗಲೇ ಕುಂದಾಪುರ ಪುರಸಭೆಗೆ ಬಿಡುಗಡೆಯಾದ ಹಣ 38.33 ಲಕ್ಷ ರೂಪಾಯಿಗಳು ಎಂದು ಆದರೆ ಯಾವುದೇ ಹಣವನ್ನು ಇದುವರೆಗೆ ವೆಚ್ಚ ಮಾಡಿಲ್ಲ. ಎನ್ನತಕ್ಕಂಥ ಉತ್ತರವನ್ನು ಆ ದಿವಸ ಕೊಟ್ಟಿದ್ದಾರೆ. ಇವ್ಹೊತ್ತು ಕೇಳಿರತಕ್ಕಂಥ ಪ್ರಶ್ನೆಗೆ ಆ ವಿಚಾರಗಳನ್ನು ಸಂಪೂರ್ಣವಾಗಿ ಮುಚ್ಚಿಟ್ಟು ಉತ್ತರವನ್ನು ಕೊಟ್ಟಿದ್ದಾರೆ. ಆದರ ಹಿನ್ನೆಲೆ ಏನು? ಈ 38.33 ಲಕ್ಷ ರೂಪಾಯಿಗಳು ಕುಂದಾಪುರ ಪುರಸಭೆಗೆ ಬಿಡುಗಡೆಯಾದದ್ದು ಇದುವರೆಗೆ ಏಕೆ ಕೆಲಸ ಆಗಿಲ್ಲ? ಏಕೆ ಖರ್ಚು ಮಾಡಿಲ್ಲ? ಆ ಹಣ ಏನಾಯಿತು ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಮಿರಾಜುದ್ದೀನ್ ಎನ್. ಪಟೇಲ್**:- ಈ ಹಿಂದೆ ಉತ್ತರ ಕೊಟ್ಟಿದ್ದರೆ ಅದನ್ನು ಸ್ವಲ್ಪ ಪರಿಶೀಲನೆ ಮಾಡಿ ನಾನು ಅವರಿಗೆ ಕರೆಕ್ಟಾಗಿ ಉತ್ತರ ಕೊಡುತ್ತೇನೆ.

**ಅಧ್ಯಕ್ಷರು** :- ಅವರ ಹತ್ತಿರ ಡೀಟೇಲ್ಸ್ ಇಲ್ಲ. He is also new to the Dept. ಟೈಮ್ ಕೊಡೋಣ. ನಿಮಗೆ ಗೊತ್ತಿದ್ದರೆ ನೀವೇ ಹೇಳಿ, ತಿಳಿದುಕೊಳ್ಳೋಣ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ** :- ನನಗೆ ಬಂದಿರುವ ಮಾಹಿತಿ ಪ್ರಕಾರ ಆ ಹಣವನ್ನು ಯಾವುದೋ ಒಂದು ಬೆಂಗಳೂರಿನ ಅರ್ಬನ್ ಬ್ಯಾಂಕಿನಲ್ಲಿಟ್ಟಿದ್ದರು, ಆ ಬ್ಯಾಂಕ್ ದಿವಾಳಿಯಾಗಿದೆ. 38.33 ಲಕ್ಷ ಕುಂದಾಪುರ ಪುರಸಭೆಗೆ ಖರ್ಚು ಮಾಡಲಿಕ್ಕೆ ಬಂದಿಲ್ಲ. ಹಣ ಖರ್ಚು ಮಾಡಲು ಆಗದೇ ಇರುವುದರಿಂದ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಡಲಿಕ್ಕೆ ಆಗದೇ ಇರುವ ಕಾರಣ ಸಂಪೂರ್ಣವಾಗಿ ಆ ಯೋಜನೆ ಬಿದ್ದು ಹೋಗುವ ಪರಿಸ್ಥಿತಿಗೆ ತಾವು ತಂದಿದ್ದೀರಿ. ಆದ ಕಾರಣ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಅವರು ಏನು ವರದಿ ಕೊಟ್ಟಿದ್ದಾರೆ ಆದನ್ನು ತಾವು ಇಲ್ಲಿ ಓದಿ ಹೇಳುತ್ತಿದ್ದೀರಿ. ಈ ಬಗ್ಗೆ ತನಿಖೆ ಮಾಡಬೇಕು. ಈ ವಿಚಾರವನ್ನು ಕಾಲಿಂಗ್ ಅಟೆನ್ಶನೆಗೂ ಕೂಡ ಕೊಟ್ಟಿದ್ದೆ. ಬಹುಶಃ ಅದು ಬಂದಿಲ್ಲ. ಅದು ಸಂಪೂರ್ಣವಾಗಿ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ.

**ಅಧ್ಯಕ್ಷರು** :- ನೋಡಿ ಅದನ್ನು ಎಕ್ಸಾಮಿನ್ ಮಾಡಿ. ಆ ತರಹ ಆಗಿದ್ದರೆ you please take action immediately.

**ಶ್ರೀ ಮಿರಾಜುದ್ದೀನ್ ಎನ್. ಪಟೇಲ್** :- ಅದು ಏನೇ ಇರಲಿ ಅದನ್ನು ಪರಿಶೀಲಿಸಿ ಬೇಕಾದರೆ ಅವರನ್ನು ಕೂಡ ಕರೆಯಿಸಿ ನನ್ನ ಜೊತೆ ಚರ್ಚೆ ಮಾಡಿ ತನಿಖೆ ಮಾಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ** :- ಅಧ್ಯಕ್ಷರೇ ಈ ಪ್ರಶ್ನೆಯನ್ನು ಮುಂದು ವರೆಸಿದರೆ ಒಳ್ಳೆಯದು. ಅಥವಾ ಕಾಲಿಂಗ್ ಅಟೆನ್ಶನ್‌ಗೆ ಅವಕಾಶ ಕೊಟ್ಟರೂ ಒಳ್ಳೆಯದು.

**ಅಧ್ಯಕ್ಷರು** :- ಮಾನ್ಯ ಸದಸ್ಯರು ಏನು ಮೆನ್ಶನ್ ಮಾಡಿದ್ದಾರೆ ಅದರ ಬಗ್ಗೆ ತಕ್ಷಣ ಎನ್‌ಕ್ವಾಯರಿ ಮಾಡಿಸಿ I will get you proper answer. I have noted down. ಕಾಲಿಂಗ್ ಅಟೆನ್ಶನ್ ನೋಡೋಣ. ಬಿಸ್‌ನೆಸ್ ನೋಡಿಕೊಂಡು ಯಾವ ರೀತಿ ಇದೆ ಅದನ್ನು ಮಾಡೋಣ.

2) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

**ಶ್ರೀ ಎಂ. ಸಿ. ನಾಣಯ್ಯ** (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, 15 ನೇ ಪಟ್ಟಿಯಲ್ಲಿರುವ 45 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ವಿಷಯ :- ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ನಿಗಧಿಯಾದ ಹಣ.**

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 806 (156)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ- ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ಯಾವ ಯಾವ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಿಲಾಗಿದೆ.

ಆ) 31-3-96 ರ ಒಳಗಾಗಿ ಬಿಡುಗಡೆ ಆದ ಹಣವೆಷ್ಟು; ಖರ್ಚಾದ ಹಣ ವೆಷ್ಟು?

ಶ್ರೀ ಮಾಲಿಕಯ್ಯ ಗುತ್ತೇದಾರ್ :- (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 1995-96 ರ ಸಾಲಿಗೆ ಕೆಳಕಂಡ ಯೋಜನೆಗಳಿಗೆ ನಿಗದಿ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ :-

| ಕ್ರ. ಸಂ. | ಯೋಜನೆಯ ವಿವರ | ಪರಿಷ್ಕರಿಸಲ್ಪಟ್ಟ ಆಯವ್ಯಯದಲ್ಲಿ ನಿಗದಿಗೊಳಿಸಿದ ಹಣ ರೂ. ಲಕ್ಷಗಳಲ್ಲಿ |
|---|---|---|
| 1) | ಮಾರ್ಜಿನ್ ಹಣ ಸಾಲದ ಯೋಜನೆ | 335-00 |
| 2) | ಸ್ವಯಂ ಉದ್ಯೋಗ ಯೋಜನೆ (ವಾಹನ ಚಾಲನಾ ತರಬೇತಿ) | 10-00 |
| 3) | ಪೋಸ್ಟ್ ಡಿಪ್ಲೊಮೋ ಇನ್ ಪೋರ್‌ಮನ್ ಶಿಪ್ ತರಬೇತಿ | 3-00 |
| 4) | ವೃತ್ತಿಪರ ತರಬೇತಿ | 15-00 |
| 5) | ಸಾಮೂಹಿಕ ನೀರಾವರಿ ಯೋಜನೆ | 270-00 |
| | ಒಟ್ಟು | 683-00 |